ಶ್ರೀ ಸಿ. ಬೈರೇಗೌಡ.—ಅದಕ್ಕೆ ಬೇರೆ ಅರ್ಥ ಇದೆ. ನನ್ನ ಜಿಲ್ಲೆಯ ಜಿಲ್ಲಾ ಪರಿಷತ್ತಿನಲ್ಲಿ ಮಾರ್ಚ್ ೩೧ರೊಳಗೆ, ಸಂಪೂರ್ಣರು ಒಂದು ಕೋಟಿ ರೂಪಾಯಿ ಹಣ ಲ್ಯಾಪ್ಸ್ ಆಗತಕ್ಕ ಸಂದರ್ಭ ಇದೆ. ಇದಕ್ಕೆ ಸರ್ಕಾರದವರು ಪರ್ಯಾಯ ವ್ಯವಸ್ಥೆ ಮಾಡಬೇಕಾಗುತ್ತದೆ. ಲ್ಯಾಪ್ಸ್ ಆಗದ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ಹೇಳಿದೆ.

ಅಧ್ಯಕ್ಷರು.—ಅದಕ್ಕೆ ಅವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಸಿ. ಬೈರೇಗೌಡ.—ಆ ಉತ್ತರ ಸಮರ್ಪಕವಾಗಿಲ್ಲ.

ಅಧ್ಯಕ್ಷರು.—ಉತ್ತರ ಸಮರ್ಪಕ ಅಥವಾ ಅಸಮರ್ಪಕ, that is subjective level of our opinion. ನಿಮಗೆ ಸಂಪೂರ್ಣವಾಗಿ, ಸಮರ್ಪಕವಾದ ಉತ್ತರವನ್ನು ಕೊಡಿ ಎಂದು ನಾನು ಸರ್ಕಾರವನ್ನು ಒತ್ತಾಯ ಮಾಡುವುದಕ್ಕೆ ಬರುವುದಿಲ್ಲ. ನೀವು ಸಮರ್ಪಕವಾದ ಉತ್ತರವನ್ನು ಕೊಡಿ ಎಂದು ಹೇಳಿ. ನನಗೆ ತಿಳಿದಹಾಗೆ ಲ್ಯಾಪ್ಸ್ ಆಗದರೀತಿಯಲ್ಲಿ ನೋಡುತ್ತೇನೆಂದು ಹೇಳಿದ್ದಾರೆ ಇದಕ್ಕೆ ನೀವೂ ಸಹಕಾರ ಕೊಡಿ.

ಶ್ರೀ ಸಿ. ಬೈರೇಗೌಡ.—ನಮ್ಮ ಸಹಕಾರ ಅವರಿಗೆ ಬೇಕಾಗಿಲ್ಲ. ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಅವರು ಇದನ್ನು ಬೇರೆ ಅರ್ಥದಲ್ಲಿ ಹೇಳುತ್ತಿದ್ದಾರೆ. ನಿನ್ನೆ ಅವರು ಸೂಕ್ಷ್ಮವಾಗಿ ಹೇಳಿದ್ದಾರೆ. ಅಲ್ಲಿರತಕ್ಕ ಅಧ್ಯಕ್ಷರಿಗೆ ಬಹುಮತ ಇಲ್ಲ. ಅವರನ್ನು ತೆಗೆಯುವುದಕ್ಕೆ ನಿಮ್ಮ ಸಹಕಾರ ಕೊಡಿ ಎಂದು ಹೇಳುತ್ತಿದ್ದಾರೆ. ಸಹಕಾರ ಕೊಡುತ್ತೇವೊ ಇಲ್ಲವೋ, ಅದು ಬೇರೆ ವಿಚಾರ. ಆದರೆ ಅಲ್ಲಿ ನಡೆದಿರತಕ್ಕ ವಿಚಾರ, ಹಣ ಲ್ಯಾಪ್ಸ್ ಆಗತಕ್ಕ ವಿಚಾರ ಇದೆ. ಇದಕ್ಕೆ ಪರ್ಯಾಯ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು.—ಸರಿ. ಈಗ ಗಮನ ಸೆಳೆಯುವ ಸೂಚನೆ. ಮೊದಲನೆಯದು ಶ್ರೀ ಎಂ. ಶಂಕರರೆಡ್ಡಿ ಅವರು. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ನನಗೆ ಪತ್ರ ಬರೆದಿದ್ದಾರೆ. ಇವತ್ತು ಅವರಿಗೆ ಕಾರ್ಯಭಾರದ ಒತ್ತಡದಿಂದ ಸದನಕ್ಕೆ ಬರುವುದು ಸಾಧ್ಯವಾಗುವುದಿಲ್ಲವೆಂದು ತಿಳಿಸಿದ್ದಾರೆ. ಆದ್ದರಿಂದ ಈ ವಿಷಯವನ್ನು ನಾಳೆ ತೆಗೆದುಕೊಳ್ಳೋಣ. ಈಗ. ಮಾನ್ಯ ಎಂ.ಪಿ. ವೆಂಕಟೇಶ್ ಅವರು, ತಮ್ಮ ವಿಷಯದ ಬಗ್ಗೆ ಗಮನ ಸೆಳೆಯಿರಿ.

ಗಮನ ಸೆಳೆಯುವ ಸೂಚನೆ

1. ಗಡಿ ತಾಲ್ಲೂಕಾದ ಹೆಗ್ಗಡದೇವನ ಕೋಟೆ ಮೂಲಕ ಕೇರಳರಾಜ್ಯಕ್ಕೆ ಪ್ರತಿದಿನ ಸಾವಿರಾರು ಆರೋಗ್ಯ ಮತ್ತು ದೃಢಕಾಯವಾಗಿರುವ ಜಾನುವಾರುಗಳ ಸಾಗಾಣಿಕೆ

ಶ್ರೀ ಎಂ. ಪಿ. ವೆಂಕಟೇಶ್ (ಹೆಗಡದೇವನ ಕೋಟೆ).—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಗಡಿ ತಾಲ್ಲೂಕಾದ ಹೆಗ್ಗಡದೇವನ ಕೋಟೆ ಮೂಲಕ ಕೇರಳ ರಾಜ್ಯಕ್ಕೆ ಪ್ರತಿದಿನ ಸಾವಿರಾರು ಆರೋಗ್ಯ ಮತ್ತು ದೃಢಕಾಯವಾಗಿರುವ ಎತ್ತು, ಹಸು, ಎಮ್ಮೆ, ಮತ್ತು ಕರುಗಳನ್ನು ಅಕ್ರಮವಾಗಿ ಸಾಗಿಸಲಾಗುತ್ತಿರುವುದರಿಂದ ಸಣ್ಣ ಮತ್ತು ಅತಿಸಣ್ಣ ರೈತರಿಗೆ ತೊಂದರೆಯಾಗುತ್ತಿರುವುದರ ಬಗ್ಗೆ ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನೆ ಖಾತೆಗಳ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣ ಅಭಿವೃದ್ಧಿ, ಪಶುಸಂಗೋಪನೆ ಮತ್ತು ಪಂಚಾಯತ್ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಮೇಲ್ಕಂಡ ಗಮನ ಸೆಳೆಯುವ ಸೂಚನೆಗೆ ಈ ಕೆಳಕಂಡ ಲಿಖಿತ ಹೇಳಿಕೆಯನ್ನು ಕೊಡಲು ಬಯಸುತ್ತೇನೆ.

ಕರ್ನಾಟಕ ಗಡಿ ಪ್ರದೇಶದಿಂದ ಕೇರಳಕ್ಕೆ ಜಾನುವಾರುಗಳನ್ನು ಸಾಗಿಸುವುದನ್ನು ಪ್ರತಿಬಂಧಿಸುವ ಬಗ್ಗೆ ಕಾಯ್ದೆ ಅಥವಾ ಕಾನೂನು ಇರುವುದಿಲ್ಲ.

ಜಾನುವಾರುಗಳಿಗೆ ಸಾಂಕ್ರಾಮಿಕ ರೋಗ ಬಂದಲ್ಲಿ ಮಾತ್ರ ಅದರ ನಿಯಂತ್ರಣಕ್ಕಾಗಿ ಜಾನುವಾರಗಳ ಸಾಗಾಣಿಕೆಯನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ನಿರ್ಭಂದಿಸಲು ಕಾನೂನಿನಲ್ಲಿ ಅವಕಾಶವಿದೆ.

ಕೇರಳ ರಾಜ್ಯದಲ್ಲಿ ಹಸುಗಳ ವಧೆಯ ಬಗ್ಗೆ ಪ್ರತಿಬಂಧಕ ಕಾಯ್ದೆಯು ಜಾರಿಯಲ್ಲಿಲ್ಲ (ಇಡೀ ದೇಶದಲ್ಲಿ ಸದರಿ ಕಾಯ್ದೆಯು ಜಾರಿಯಲ್ಲಿದ್ದು, ಈ ಕಾಯ್ದೆಯು ಕೇರಳ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಜಾರಿಯಲ್ಲಿಲ್ಲ) ಆದ್ದರಿಂದ ಪೂರಾಟಗಾರರು ಕರ್ನಾಟಕದಲ್ಲಿನ ಜಾನುವಾರುಗಳನ್ನು ಮಾಲೀಕರಿಂದ ಲಾಭದಾಯಕ ಬೆಲೆಗೆ ಕೊಂಡು ಕೇರಳ ರಾಜ್ಯಕ್ಕೆ ಸಾಗಿಸಬಹುದಾಗಿದೆ,

ಶ್ರೀ ಎಂ .ಪಿ. ವೆಂಕಟೇಶ್.—ಮಾನ್ಯ ಅಧ್ಯಕ್ಷರೇ, ಹೆಗಡದೇವನ ಕೋಟೆ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಿಂದ ಪ್ರತಿದಿನ ಸಾವಿರಾರು ಜಾನುವಾರುಗಳನ್ನು ಕೇರಳರಾಜ್ಯಕ್ಕೆ ಸಾಗಿಸಿ ಅಲ್ಲಿಂದ ದುಬಾಯಿಗೆ ಕಳುಹಿಸಿಕೊಡುತ್ತಿದ್ದಾರೆ. ಸಣ್ಣ ಸಣ್ಣ ಕರುಗಳನ್ನೂ ಸಹ ಬಿಡುತ್ತಿಲ್ಲ. ಗಡಿಚೆಕ್ ಪೋಸ್ಟ್‌ಗಳಲ್ಲಿ ಲೆಕ್ಕ ಇದೆ, ತರಿಸಿ ನೋಡಿ. ಒಂದು ಹಸುವಿಗೆ ಒಂದು ರೂಪಾಯಿನಂತೆ ಪ್ರತಿದಿನ ಸಾವಿರಾರು ರೂಪಾಯಿ ಕಲೆಕ್ಟ್ ಮಾಡುತ್ತಿದ್ದಾರೆ. ಈಗ ವ್ಯವಸಾಯಕ್ಕೆ ಜಾನುವಾರುಗಳೇ ಸಿಗುತ್ತಿಲ್ಲ. ರೈತರಿಗೆ ತೊಂದರೆಯಾಗಿದೆ ಸಣ್ಣ ಸಣ್ಣ ಕರುಗಳನ್ನೂ ಸಾಗಿಸಿಕೊಂಡು ಹೋಗುತ್ತಿದ್ದಾರೆ. ಗುಂಡ್ಲುಪೇಟೆ ಮತ್ತು ಹೆಗಡೆದೇವನ ಕೋಟೆ ಬಾರ್ಡರ್‌ಗಳಿಂದ ಹೋಗುತ್ತಿವೆ. ಪ್ರತಿದಿನ ನೂರಾರು ಲಾರಿಗಳು ಬರುತ್ತಿವೆ. ನಮ್ಮ ಹಳ್ಳಿಗಳ ಕಡೆ ಉಳುಮೆ ಮಾಡಲೂ ಕೂಡ ಹಸುಗಳು ಸಿಗುತ್ತಿಲ್ಲ, ದಯವಿಟ್ಟು ಸರಕಾರ ಇದನ್ನು ಪ್ರತಿಬಂಧಿಸಬೇಕೆಂದು ಆದೇಶ ಮಾಡಬೇಕು. ಇಲ್ಲದಿದ್ದರೆ ರೈತರಿಗೆ ತೊಂದರೆಯಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ ರೈತರಿಗೆ ತೊಂದರೆಯಾಗಿರತಕ್ಕಂಥ ವಿಷಯದಲ್ಲಿ ನನಗೆ ಗೊತ್ತಿಲ್ಲ. ಕಾರಣ ಏನೆಂದು ಹೇಳಿದರೆ ಜಾನುವಾರುಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ವರ್ಷೇ ವರ್ಷೇ ಜಾಸ್ತಿಯಾಗುತ್ತಿದೆ. ಆದರಲ್ಲಿ ಕೆಲಸಕ್ಕೆ ಬಾರದ ಹಸುಗಳು ಹೋಗಲೇ ಬೇಕಾಗುತ್ತದೆ. ಹೋಗಿದ್ದಾವೆ. ಅದನ್ನು ತಡೆಯಲು ಕಾನೂನು ಇಲ್ಲದಿರುವುದರಿಂದ ಇದನ್ನು ಪ್ರತಿಬಂಧನೆ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಸಿ. ಬೈರೇಗೌಡ.—ಇದನ್ನು ಪ್ರತಿಬಂಧಿಸುವುದಕ್ಕೆ ತಕ್ಷಣ ಕಾನೂನು ಇಲ್ಲದಿರಬಹುದು. ಮುಂದಾದರೂ ಕೂಡಾ ಈ ರೀತಿ ಪಶುಗಳ ಸಾಗಾಣಿಕೆ ಜಗದಹಾಗೆ ಪ್ರತಿಬಂಧಿಸುವುದಕ್ಕೆ ಸರಕಾರ ಕಾನೂನು ತರುವುದಕ್ಕೆ ಯೋಚನೆ ಮಾಡುತ್ತದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಸಾಗಾಣಿಕೆಗೆ ನಿರ್ಬಂಧ ಮಾಡುವುದಕ್ಕೆ, ಅಡ್ಡಿ ಮಾಡುವುದಕ್ಕೆ ಆಗುವುದಿಲ್ಲ. ಕಾರಣ ಇದು ಫ್ರೀ ಟ್ರೇಡ್. ನಾವು ಆ ಕಾನೂನು ಮಾಡುವುದಕ್ಕೆ ಪ್ರಯತ್ನ ಮಾಡುವುದಕ್ಕೂ ಆಗುವುದಿಲ್ಲ.

ಶ್ರೀ ಎಂ.ಪಿ. ವೆಂಕಟೇಶ್.—ಹಿಂದಿನ ಸರಕಾರದವರು ಈ ರೀತಿ ಮಾಡುತ್ತಿದ್ದಾರೆ ಎಂದು ತಾವು ಗಲಾಟೆ ಮಾಡುತ್ತಿದ್ದಿರಿ, ಜಾನುವಾರುಗಳನ್ನು ದುಬಾಯಿಗೆ ಕಳುಹಿಸುತ್ತಿದ್ದಾರೆ ಜನತಾ ಸರಕಾರದವರು ಕಳುಹಿಸುತ್ತಿದ್ದಾರೆ, ಎಂದು ವಿರೋಧ ಪಕ್ಷದವರು ಸ್ಟೇಟ್ ಪೊಂಟ್ ಮಾಡಿ ಗಲಾಟೆ ಮಾಡುತ್ತಿದ್ದರು. ನಿಮ್ಮ ಸರ್ಕಾರ ಬಂದ ಮೇಲೂ ಪಶುಗಳನ್ನು ಕೊಯ್ಯಲು ದುಬಾಯಿಗೆ ಕಳುಹಿಸಿ ಕೊಡುವುದೇ ?

ಶ್ರೀ ಬಿ. ಬಸವಲಿಂಗಪ್ಪ.—ಸಾಮಿ ಗಲಾಟೆ ಮಾಡಿಲ್ಲ. ದಿನೇ ದಿನೇ ವರ್ಷೇ ವರ್ಷೇ ತಿಂಗಳು ತಿಂಗಳು ಜಾನುವಾರುಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಕಡಿಮೆ ಆಗಿಲ್ಲ.

ಶ್ರೀ ಸಿ. ಬೈರೇಗೌಡ.—ದನಗಳನ್ನು ವಧೆ ಮಾಡಬೇಕಾಗಿದ್ದರೂ ಅದಕ್ಕೆ ವಯಸ್ಸಿನ ಮಿತಿ ಇದೆ, ಎಂತೆಂತಹ ಪಶುಗಳನ್ನು ವಧೆ ಮಾಡಬೇಕೆಂದು ಕಾನೂನು ಎಲ್ಲಾ ಕಡೆ ಇದೆ, ನಮ್ಮ ರಾಜ್ಯದಲ್ಲೂ ಕೂಡ ಇದೆ. ಈಗಿರತಕ್ಕಂಥ ಕಾನೂನಿಗೆ ಒಳಪಟ್ಟು ಆ ವಯಸ್ಸಿಗೆ ಒಳಪಟ್ಟಿರುವ ಹಾಗೂ ಕೆಲಸಕ್ಕೆ ಬಾರದಿರುವಂತಹ ದನಗಳು ಯಾವುವು ಇವೆ ಅವುಗಳನ್ನು ವಧೆ ಮಾಡುವುದಕ್ಕೆ ಅವಕಾಶ ಇದೆ. ಕೆಲಸಕ್ಕೆ ಬರುವ ವಯಸ್ಸು ಕಡಿಮೆ ಇರುವ ದನಕರುಗಳನ್ನು ವಧೆ ಮಾಡುವುದಕ್ಕೆ ಕಾನೂನು ಇಲ್ಲ. ಇರತಕ್ಕಂಥ ಕಾನೂನು ಏನಿದೆ ಅದನ್ನಾದರೂ ಕೂಡಾ ಜಾರಿಗೆ ತಂದು, ಇದನ್ನು ನಿಲ್ಲಿಸುವುದಕ್ಕೆ ಕ್ರಮ ತೆಗೆದುಕೊಳ್ಳಲು ಪ್ರಯತ್ನ ಪಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಈ ಕ್ಯಾಟಲ್‌ಗಳ ಸಂಖ್ಯೆ ಹೇಳಿಬಿಡುತ್ತೇನೆ. ಕ್ಯಾಟಲ್ಸ್ ೧೯೭೮ನೇ ಇಸವಿಯಲ್ಲಿ ೧೦೦ ಲಕ್ಷ ಇದ್ದಾದು ೧೯೭೩ರಲ್ಲಿ ೧೦೨ ಲಕ್ಷ, ೮೩ನೇ ಇಸವಿಯಲ್ಲಿ ೧೧೩ ಲಕ್ಷ, ೮೦ನೇ ಇಸವಿಯಲ್ಲಿ ೧೨೭ ಲಕ್ಷ ಇವೆ. ಎಮ್ಮೆಗಳು ೨೨ ಲಕ್ಷ ಇದ್ದುದು ಈಗ ೧೯೮೮ನೇ ಇಸವಿಯಲ್ಲಿ ೪೧ ಲಕ್ಷಕ್ಕೆ ಏರಿದೆ. ನಾವು ಇಷ್ಟು ಸಂಖ್ಯೆಯಲ್ಲಿ ಜಾನುವಾರುಗಳನ್ನು ಉತ್ಪತ್ತಿ ಮಾಡುತ್ತಿದ್ದೇವೆ. ನಾವು ಅದನ್ನು ಏನಾದರೂ ಮಾಡಿ ಉಪಯೋಗಿಸಬೇಕಲ್ಲ. ನಾವು ಇದರ ಬಗ್ಗೆ ಏನಾದರೂ ನಿಯಂತ್ರಣ ಮಾಡಿದರೆ, ಇಷ್ಟು ದನಕರುಗಳನ್ನೂ ಸಾಕಬೇಕಾಗುತ್ತದೆ. ಮೇವಿನ ಸಮಸ್ಯೆ ಬರುತ್ತದೆ. ಜಾಗದ ಸಮಸ್ಯೆ ಬರುತ್ತದೆ. ಅವುಗಳನ್ನು ನಾವು ಉಪಯೋಗಿಸಿಕೊಳ್ಳಲೇ ಬೇಕು.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ ನನ್ನ ಪ್ರಶ್ನೆಗೆ ಮಾನ್ಯ ಮಂತ್ರಿಗಳಿಂದ ಉತ್ತರ ಬರಲಿಲ್ಲ. ಈಗ ಇರತಕ್ಕಂಥ ಕಾನೂನಿನಲ್ಲಿ ವಯಸ್ಸಾಗಿರತಕ್ಕಂಥ ದನಗಳನ್ನು ವಾತ್ಸ ಕಡಿಯುವುದಕ್ಕೆ ಅವಕಾಶ ಇದೆ. ಬೇರೆ ಸಣ್ಣ ಸಣ್ಣ ಕರುಗಳನ್ನು ಕಡಿಯುವುದಕ್ಕೆ ಅವಕಾಶ ಇಲ್ಲ. ಅನಾಮತ್ತಾಗಿ

ದನಗಳನ್ನು ಕಡಿಯುವುದಕ್ಕೆ ಅವಕಾಶ ಇಲ್ಲ, ಈಗ ಅಲ್ಲಿ ಸಣ್ಣ ಸಣ್ಣ ಕರುಗಳನ್ನು ಸಹ ಕಡಿಯಲು ತೆಗೆದುಕೊಂಡು ಹೋಗುತ್ತಾರೆ. ಕರುಗಳನ್ನು ಕಡಿಯುವುದಕ್ಕೆ ಅವಕಾಶ ಇಲ್ಲ ಅದನ್ನಾದರೂ ನಿಯಂತ್ರಣ ಮಾಡುತ್ತೀರಾ ? ಇದಕ್ಕೆ ಮಾನ್ಯ ಮಂತ್ರಿಗಳು ನನಗೆ ಸ್ಪಷ್ಟವಾದ ಉತ್ತರ ಹೇಳಬೇಕು.

ಅಧ್ಯಕ್ಷರು.—ಕಾನೂನಿನಲ್ಲಿ ಏನಾದರೂ ಅವಕಾಶ ಇದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಇಲ್ಲ.

ಅಧ್ಯಕ್ಷರು.—ಅವಕಾಶ ಇಲ್ಲ ಎಂದು ಹೇಳುತ್ತಿದ್ದಾರೆ:

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಮಾಡಿದ ಬಹಳ ಚೆನ್ನಾಗಿ ಮಾಡಿದ್ದಾರೆ. ಸಂತೋಷ ಅವರ ಮಾದವನ್ನು ನಾನು ಕೇಳಿದ್ದೇನೆ. ಮುಂದೆ ನೋಡೋಣ.

ನಿಯಮ ೩೩ಳಿರ ಮೇರೆಗೆ

೧) ಮಂಡ್ಯ ನಗರದಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯವರು ಕಟ್ಟುತ್ತಿರುವ ಗೃಹಗಳು ಕಳೆದ ಹತ್ತು ವರ್ಷಗಳಿಂದ ಅಪೂರ್ಣಗೊಂಡಿರುವುದು

ಶ್ರೀ ಎಂ.ಎಸ್. ಆತ್ಮಾನಂದ.—ಮಾನ್ಯ ಅಧ್ಯಕ್ಷರೇ ಕರ್ನಾಟಕ ರಾಜ್ಯ ಕೊಳಚೆ ನಿರ್ಮೂಲನ ಮಂಡಳಿಯ ಪರವಿಂದ ಮಂಡ್ಯ ನಗರದಲ್ಲಿ ಕೊಳಚೆ ಪ್ರದೇಶದ ನಿವಾಸಿಗಳಿಗಾಗಿ ವಸತಿ ಸೌಕರ್ಯ ಕಲ್ಪಿಸುವ ಸಲುವಾಗಿ ಗೃಹಗಳ ನಿರ್ಮಾಣ ಯೋಜನೆಯನ್ನು ಕೈಗೊಂಡು ಹತ್ತು ವರ್ಷಗಳು ಕಳೆದಿದೆ. ಇಷ್ಟು ದೀರ್ಘಕಾಲ ಕಳೆದರೂ ಮನೆಗಳು ಅಪೂರ್ಣವಾಗಿರುವುದು ಸರ್ಕಾರ ಮನಗಂಡಿದೆಯೇ ಈ ಯೋಜನೆಯನ್ನು ಸರ್ಕಾರ ಪೂರ್ಣಗೊಳಿಸಲು ಏನು ಕ್ರಮ ಕೈಗೊಳ್ಳುತ್ತದೆ ?

ಶ್ರೀ ಎಂ. ವೀರಪ್ಪ ಮೊಯಿಲಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ ಈ ವಿಚಾರವನ್ನು ಸಂಬಂಧಪಟ್ಟ ಬಂದರು ಮತ್ತು ವಿನಾಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಸಚಿವರ ಗಮನಕ್ಕೆ ತಂದು ಮತ್ತು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಹೇಳುತ್ತೇನೆ.

೨) ರಾಜ್ಯದಲ್ಲಿ ರೈತರು ವ್ಯವಸಾಯಕ್ಕೆ ಉಪಯೋಗಿಸುವ ಟ್ರಾಕ್ಟರ್ ಹಾಗೂ ಟ್ರೇಲರುಗಳ ಫಿಟ್‌ನೆಸ್ ಸರ್ಟಿಫಿಕೇಟುಗಳನ್ನು ತೆಗೆದುಕೊಳ್ಳುವ ಅವಧಿಯನ್ನು ಎರಡು ವರ್ಷಗಳಿಗೆ ಏರಿಸಲು ಒತ್ತಾಯ

ಶ್ರೀ ಪರಿಕಾಲ್ ಎಂ. ಮಲ್ಲಪ್ಪ.— ಮಾನ್ಯ ಅಧ್ಯಕ್ಷರೇ ರಾಜ್ಯದಲ್ಲಿ ರೈತರು ವ್ಯವಸಾಯಕ್ಕೆ ಉಪಯೋಗಿಸುವ ಅಂದರೆ ತಾವು ಬೆಳೆದ ಬೆಳೆಯನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗಲು ಉಪಯೋಗಿಸುವ ಟ್ರಾಕ್ಟರ್ಸ್ ಹಾಗೂ ಟ್ರೇಲರ್ಸ್‌ಗಳ ಫಿಟ್‌ನೆಸ್ ಸರ್ಟಿಫಿಕೇಟ್‌ಗಳನ್ನು ಈಗ ಪ್ರತಿ ವರ್ಷ ಪುನರ್ ನವೀಕರಣ ಮಾಡಬೇಕಾಗಿದೆ. ರೈತರು ಪ್ರತಿ ವರ್ಷ ತಮ್ಮ ಟ್ರಾಕ್ಟರ್ಸ್ ಹಾಗೂ ಟ್ರೇಲರ್ಸ್‌ಗಳನ್ನು ಪ್ರಾದೇಶಿಕ ಸಾರಿಗೆ ಕಛೇರಿಗೆ ತೆಗೆದುಕೊಂಡು ಹೋಗಿ ಸುಮಾರು ೬೦೦ ರೂಪಾಯಿಗಳಷ್ಟು ಖರ್ಚು ಮಾಡಬೇಕಾಗಿದೆ. ಮೊದಲು ಎರಡು ವರ್ಷಕ್ಕೆ ಒಂದು ಸಾರಿ ಪುನರ್ ನವೀಕರಣ ಮಾಡುವ ವ್ಯವಸ್ಥೆ ಇದ್ದು ಈಗ ಒಂದು ವರ್ಷಕ್ಕೆ ಒದಲಾಯಿಸಿರುವುದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಸರ್ಕಾರದವರು ಈ ಟ್ರಾಕ್ಟರ್ ಹಾಗೂ ಟ್ರೇಲರ್ಸ್‌ಗಳ ಫಿಟ್‌ನೆಸ್ ಸರ್ಟಿಫಿಕೇಟ್‌ಗಳ ಪುನರ್ ನವೀಕರಣ ಅವಧಿಯನ್ನು ಎರಡು ವರ್ಷಕ್ಕೆ ಏರಿಸಬೇಕೆಂದು ಕೋರುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಆಹಾರ ಮತ್ತು ಸಾರಿಗೆ ಸಚಿವರು).—ಅಧ್ಯಕ್ಷರೇ,

ಟ್ರಾಕ್ಟರ್‌ಗಳಿಗೋದಕ್ಕೆ ಅರ್ಹತಾ ಪ್ರಮಾಣ ಪತ್ರದ ಆವಶ್ಯಕತೆ ಇರುವುದಿಲ್ಲ. ಆದರೆ ಟ್ರೈಲರ್‌ಗಳನ್ನು ಜೋಡಿಸಲ್ಪಟ್ಟ ಟ್ರಾಕ್ಟರ್ ಟ್ರೈಲರ್‌ಗಳಿಗೆ ಮಾತ್ರ ಅರ್ಹತಾ ಪ್ರಮಾಣ ಪತ್ರದ ಅವಶ್ಯಕತೆ ಇದೆ.

ನಿಯಮ ೬೨ ಕೇಂದ್ರ ಮೋಟಾರು ವಾಹನಗಳ ನಿಯಮಾವಳಿಗಳು ೧೯೮೯ರನುಸಾರ ಹೊಸ ಟ್ರಾಕ್ಟರ್ ಟ್ರೈಲರ್ ಅರ್ಹತಾ ಪ್ರಮಾಣ ಪತ್ರವು ೫ ವರ್ಷಗಳವರೆಗೆ ಜಾರಿಯಲ್ಲಿರುವುದು. ೫ನೇ ವರ್ಷಗಳ ನಂತರ ಪ್ರತಿ ೧ ವರ್ಷದವರೆಗೆ ಮಾತ್ರ ನವೀಕರಣ ಮಾಡಲಾಗುವುದು. ಆದ್ದರಿಂದ, ನೋಂದಣಿ ಮಾಡಲ್ಪಟ್ಟ ದಿನದಿಂದ ಎರಡು ವರ್ಷಗಳು ಮುಗಿದ ಮೇಲೆ ಟ್ರಾಕ್ಟರ್ ಟ್ರೈಲರ್‌ಗಳು